# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ವನ್ಯಪ್ರಾಣಿಗಳ ದಾಳಿಯಿಂದ ಗಾಯಗೊಂಡ ಸಂತ್ರಸ್ಥರಿಗೆ ವೈದ್ಯಕೀಯ ವೆಚ್ಚ ಭರಿಸುವ ಕುರಿತು.

**ಓದಲಾಗಿದೆ:** 1. ಸರ್ಕಾರದ ಆದೇಶ ಸಂಖ್ಯೆ: ಅಪಜೀ 143 ಎಫ್‌ಡಬ್ಲ್ಯುಎಲ್ 2010 ಬೆಂಗಳೂರು, ದಿನಾಂಕ: 30-04-2011.

2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ), ಬೆಂಗಳೂರು ಇವರ ಪತ್ರ ಸಂಖ್ಯೆ: ಸಿ2/ಡಬ್ಲ್ಯುಎಲ್/ಸಿಆರ್-37/2011-12, ದಿನಾಂಕ: 30-03-2013.

***

**ಪ್ರಸ್ತಾವನೆ:**

ಮೇಲೆ (1)ರಲ್ಲಿ ಓದಲಾದ ದಿನಾಂಕ: 30-04-2011ರ ಸರ್ಕಾರಿ ಆದೇಶದಲ್ಲಿ ಕಾಡು ಪ್ರಾಣಿಗಳಿಂದ ಗಾಯಗೊಂಡ ಪ್ರತಿ ವ್ಯಕ್ತಿಗೆ ಗರಿಷ್ಠ ಮೊತ್ತ ರೂ.20,000/-ಗಳ ದಯಾತ್ಮಕ ಧನ ಮಂಜೂರು ಮಾಡಲು ಅರಣ್ಯ ಇಲಾಖೆಯ ಕ್ಷೇತ್ರ ವ್ಯಾಪ್ತಿಯ ಅಧಿಕಾರಿಗಳಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಿ ಮಂಜೂರಾತಿ ಆದೇಶ ನೀಡಲಾಗಿದೆ.

2. ಮೇಲೆ(2)ರಲ್ಲಿ ಓದಲಾದ ದಿನಾಂಕ: 30-03-2013ರ ಪತ್ರದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಬೆಂಗಳೂರು ಇವರು ಸರ್ಕಾರದ ದಿನಾಂಕ: 30-04-2011ರ ಆದೇಶದಲ್ಲಿ ಕಾಡು ಪ್ರಾಣಿಗಳ ದಾಳಿಯಿಂದ ಶಾಶ್ವತ ಅಂಗವಿಕಲತೆಗೊಂಡ ಪ್ರಕರಣಗಳಲ್ಲಿ ಸಂತ್ರಸ್ಥರಿಗೆ ದಯಾತ್ಮಕ ಧನದೊಂದಿಗೆ ಶುಶ್ರೂಷೆಗಾಗಿ ಮಾಡಿದ ವೆಚ್ಚವನ್ನು ಸಹ ಭರಿಸಲು ಅವಕಾಶ ಕಲ್ಪಿಸಿರುವುದನ್ನು ಉಲ್ಲೇಖಿಸಿ, ಆದರೆ ಸದರಿ ಆದೇಶದಲ್ಲಿ ಕಾಡು ಪ್ರಾಣಿಗಳ ದಾಳಿಯಿಂದ ಗಾಯಗೊಂಡ ವ್ಯಕ್ತಿಗಳಿಗೆ ವೈದ್ಯಕೀಯ ವೆಚ್ಚ ಭರಿಸುವ ಅವಕಾಶ ಕಲ್ಪಿಸಿರುವುದಿಲ್ಲ ಎಂಬ ಅಂಶದ ಕಡೆಗೆ ಗಮನ ಸೆಳೆದು, ಕಾಡು ಪ್ರಾಣಿಗಳ ದಾಳಿಯಿಂದ ಗಾಯಗೊಂಡ ಸಂತ್ರಸ್ಥರಿಗೆ ಈಗ ನೀಡಲಾಗುತ್ತಿರುವ ದಯಾತ್ಮಕಧನದೊಂದಿಗೆ ಗಾಯದಿಂದ ಶುಶ್ರೂಷೆ ಪಡೆಯಲು ವೆಚ್ಚ ಮಾಡಿದ ಹಣವನ್ನು ಸಹ ಪಾವತಿಸುವ ಕುರಿತು ಸೂಕ್ತ ಆದೇಶ ಹೊರಡಿಸಲು ಕೋರಿ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಆದ್ದರಿಂದ ಈ ಕೆಳಗಿನಂತೆ ಆದೇಶ ಹೊರಡಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಅಪಜೀ 128 ಎಫ್‌ಡಬ್ಲ್ಯೂಎಲ್ 2013
## ಬೆಂಗಳೂರು, ದಿನಾಂಕ: 15.09.2015

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಕಾಡುಪ್ರಾಣಿಗಳ ದಾಳಿಯಿಂದ ಶಾಶ್ವತ ಅಂಗವಿಕಲತೆಗೆ ಒಳಗಾದ ಸಂತ್ರಸ್ಥರಿಗೆ ದಯಾತ್ಮಕಧನದ ಜೊತೆಗೆ ವೈದ್ಯಕೀಯ ವೆಚ್ಚವನ್ನು ಸಹ ನೀಡುತ್ತಿರುವುದರಿಂದ, ಕಾಡು ಪ್ರಾಣಿಗಳ ದಾಳಿಯಿಂದ ಗಾಯಗೊಂಡ ಇತರೆ ಪ್ರಕರಣಗಳಲ್ಲಿಯೂ ಸಹ ಸಂತ್ರಸ್ಥರಿಗೆ ದಯಾತ್ಮಕಧನದ ಜೊತೆಗೆ ವೈದ್ಯಕೀಯ ವೆಚ್ಚವನ್ನು ಕೆಳಕಂಡ ಷರತ್ತುಗಳಿಗೊಳಪಟ್ಟು ಮಂಜೂರು ಮಾಡಲು ಆದೇಶಿಸಲಾಗಿದೆ.

1. ವೈದ್ಯಕೀಯ ವೆಚ್ಚದ ದರಗಳನ್ನು ಸರ್ಕಾರಿ ನೌಕರರಿಗೆ ಅನ್ವಯಿಸುವ ಸಿಜಿಹೆಚ್‌ಎಸ್ ದರಗಳಿಗೆ ಮಿತಿಗೊಳಿಸತಕ್ಕದ್ದು.
2. ಈ ಸೌಲಭ್ಯವು ಈ ಆದೇಶ ಹೊರಡಿಸಿದ ದಿನಾಂಕದಿಂದ ಜಾರಿಗೆ ಬರುವುದು.
3. ಪ್ರಸ್ತುತ ಲೆಕ್ಕ ಶೀರ್ಷಿಕೆಯಡಿ ಒದಗಿಸಿರುವ ಅನುದಾನದಲ್ಲಿಯೇ ಹೆಚ್ಚುವರಿ ವೆಚ್ಚವನ್ನು ಭರಿಸತಕ್ಕದ್ದು.

2. ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 663 ವೆಚ್ಚ-5/2013, ದಿನಾಂಕ: 27.08.2013ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ಪಿ.ಪಾಟೀಲ)
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

**ಗೆ,**

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿದೆ ಹಾಗೂ ಪ್ರಕಟಿತ 100 ಪ್ರತಿಗಳನ್ನು ರಾಜ್ಯ ಸರ್ಕಾರಕ್ಕೆ ಹಾಗೂ 500 ಪ್ರತಿಗಳನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಇವರಿಗೆ ಕಳುಹಿಸಿಕೊಡಲು ಕೋರಿದೆ.

ಪ್ರತಿಗಳು:

1. ಪ್ರಧಾನ ಮಹಾಲೇಖಪಾಲರು (ಜಿ ಮತ್ತು ಎಸ್ ಎಸ್ ಎ)/(ಇ ಮತ್ತು ಆರ್ ಎಸ್ ಎ)/(ಎ ಮತ್ತು ಇ) ಕರ್ನಾಟಕ, ಬೆಂಗಳೂರು-560 001.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು -560 003.
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ), ಅರಣ್ಯ ಭವನ, 18ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು -560 003.
4. ಎಲ್ಲಾ ಅಪರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು / ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು / ಅರಣ್ಯ ಸಂರಕ್ಷಣಾಧಿಕಾರಿಗಳು / ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಾದೇಶಿಕ/ವನ್ಯಜೀವಿ) / ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ), ಬೆಂಗಳೂರು ಇವರ ಮುಖಾಂತರ).
5. ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಯ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
6. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-5), ವಿಧಾನಸೌಧ, ಬೆಂಗಳೂರು.
7. ಶಾಖಾ ರಕ್ಷಾ ಕಡತ/ಹೆಚ್ಚುವರಿ ಪ್ರತಿಗಳು.

## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ** : 2014-15ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಘೋಷಣೆಯಾದ ಹೊಸ ಕಾರ್ಯಕ್ರಮ:- ವನ್ಯ ಪ್ರಾಣಿಗಳಿಂದ ಉಂಟಾದ ಬೆಳೆಹಾನಿ ದನ-ಎಮ್ಮೆಗಳ ಪ್ರಾಣಹಾನಿಗೆ ಪರಿಹಾರ ಹೆಚ್ಚಿಸುವ ಕುರಿತು.

**ಓದಲಾಗಿದೆ** : ಸರ್ಕಾರದ ಆದೇಶದ ಸಂಖ್ಯೆ: ಅಪಜೀ 143 ಎಫ್‌ಡಬ್ಲ್ಯೂಎಲ್ 2010, ದಿನಾಂಕ 30-04-2011.

****

**ಪ್ರಸ್ತಾವನೆ:**

ಮೇಲೆ ಓದಲಾದ ದಿನಾಂಕ 30-04-2011ರ ಸರ್ಕಾರದ ಆದೇಶದಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಬೆಳೆನಾಶ, ಮಾನವ ಪ್ರಾಣಹಾನಿ, ಸಾಕುಪ್ರಾಣಿಗಳ ಪ್ರಾಣಹಾನಿ, ಶಾಶ್ವತ ಅಂಗವಿಕಲತೆ, ಗಾಯ ಗೊಂಡವರಿಗೆ ಹಾಗೂ ಆಸ್ತಿ-ಪಾಸ್ತಿ ನಷ್ಟಕ್ಕೆ ಸಂಬಂಧಿಸಿದಂತೆ ಪರಿಹಾರ ಮೊತ್ತವನ್ನು ನಿಗದಿಪಡಿಸಿ ವಿತರಿಸಲು ಅರಣ್ಯ ಇಲಾಖೆಯ ಕ್ಷೇತ್ರಾಧಿಕಾರಿಗಳಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಿ ಮಂಜೂರಾತಿ ನೀಡಲಾಗಿದೆ.

2. ಸರ್ಕಾರವು 2014-15ನೇ ಸಾಲಿನ ಆಯವ್ಯಯದಲ್ಲಿ, "ಮಾನವ-ವನ್ಯಜೀವಿ ಸಂಘರ್ಷದಿಂದಾಗಿ ದನ-ಕರುಗಳು/ಸಾಕು ಪ್ರಾಣಿಗಳು ಮೃತಪಟ್ಟಲ್ಲಿ ಅವುಗಳ ಮಾಲೀಕರಿಗೆ ಹಾಲಿ ನೀಡಲಾಗುತ್ತಿರುವ ಪರಿಹಾರ ಧನವನ್ನು ರೂ.2500-3000 ಗಳಿಂದ ರೂ.5000-6000 ಗಳಿಗೆ ಹೆಚ್ಚಿಸಲು ಹಾಗೂ ಬೆಳೆ ಹಾನಿ ಉಂಟಾದಲ್ಲಿ ಸಂತ್ರಸ್ಥ ರೈತರಿಗೆ ನೀಡಲಾಗುತ್ತಿರುವ ಪರಿಹಾರದ ಧನದ ಗರಿಷ್ಟ ಮಿತಿಯನ್ನು ರೂ.50,000/- ಗಳಿಂದ ರೂ.75,000/- ಗಳಿಗೆ ಹೆಚ್ಚಿಸಲಾಗುವುದು ಎಂದು ಘೋಷಿಸಿರುತ್ತದೆ.

3. ಪ್ರಸ್ತುತ ಜಾರಿಯಲ್ಲಿರುವ ಸರ್ಕಾರಿ ಆದೇಶ ಸಂಖ್ಯೆ: ಅಪಜೀ 143 ಎಫ್‌ಡಬ್ಲ್ಯೂಎಲ್ 2010, ದಿನಾಂಕ: 30.04.2011ರನ್ವಯ 2009-10ನೇ ಸಾಲಿನಿಂದ 2013-14ನೇ ಸಾಲಿನವರೆಗೆ ಒಟ್ಟು 1,23,191 ಬೆಳೆ ನಾಶ ಪ್ರಕರಣಗಳು ಸಂಭವಿಸಿದ್ದು, ಈ ಉದ್ದೇಶಕ್ಕಾಗಿ ಕಳೆದ 05 ವರ್ಷಗಳಲ್ಲಿ ಒಟ್ಟು ರೂ.32,76,67,671/- ಗಳನ್ನು ಬೆಳೆನಾಶಗೊಂಡ ರೈತರಿಗೆ ಪಾವತಿಸಲಾಗಿದೆ

4. ವನ್ಯಪ್ರಾಣಿಗಳಿಂದ ದನ-ಕರುಗಳ ಪ್ರಾಣಹಾನಿಗೆ ಕನಿಷ್ಟ ರೂ. 2,500/- ಗರಿಷ್ಟ ರೂ. 3,000/- ಪಾವತಿಸಲಾಗುತ್ತಿದೆ. ಇದನ್ನು ಕಳೆದ 5 ವರ್ಷಗಳಲ್ಲಿ ಅಂದರೆ 2009-10ನೇ ಸಾಲಿನಿಂದ 2013-14ನೇ ಸಾಲಿನವರೆಗೆ ವನ್ಯಪ್ರಾಣಿಗಳಿಂದ ಒಟ್ಟು 4073 ದನಕರುಗಳ ಪ್ರಾಣಹಾನಿ ಸಂಭವಿಸಿರುತ್ತದೆ. ಇದಕ್ಕಾಗಿ 05 ವರ್ಷಗಳಲ್ಲಿ ಒಟ್ಟು ರೂ.1,29,95,943/- ಗಳನ್ನು ಪ್ರಾಣಿಗಳ ಮಾಲೀಕರಿಗೆ ಪಾವತಿಸಲಾಗಿದೆ.

5. ಪ್ರಸ್ತುತ ಮಾನವ-ವನ್ಯಜೀವಿ ಸಂಘರ್ಷದಿಂದಾಗಿ ಹಸು, ಎತ್ತು, ಎಮ್ಮೆ, ಕೋಣಗಳು ಮೃತಪಟ್ಟಲ್ಲಿ ಅವುಗಳ ಮಾಲೀಕರಿಗೆ ನೀಡಲಾಗುತ್ತಿರುವ ಪರಿಹಾರ ಧನವನ್ನು ರೂ.10,000/- ಕ್ಕೆ ಹೆಚ್ಚಿಸಲು ~~ಹಾಗೂ ಮೇಕೆ, ಕುರಿಗಳು ಮೃತಪಟ್ಟಲ್ಲಿ ಅವುಗಳ ಮಾಲೀಕರಿಗೆ ನೀಡಲಾಗುತ್ತಿರುವ~~ ಪರಿಹಾರ ಧನವನ್ನು ರೂ.5,000/-ಗಳಿಗೆ ಹೆಚ್ಚಿಸಲು ಹಾಗೂ ಬೆಳೆ ಹಾನಿ ಉಂಟಾದಲ್ಲಿ ಸಂತ್ರಸ್ಥ ರೈತರಿಗೆ ನೀಡಲಾಗುತ್ತಿರುವ ಪರಿಹಾರ ಧನದ ಗರಿಷ್ಟ ಮಿತಿಯನ್ನು ರೂ.1,00,000/-ಗಳಿಗೆ ಹೆಚ್ಚಿಸಲು ಸರ್ಕಾರವು ನಿರ್ಧರಿಸಿರುವುದರಿಂದ ಈ ಕೆಳಕಂಡ ಆದೇಶ ಹೊರಡಿಸಿದೆ.

ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ) ಬೆಂಗಳೂರು
20 AUG 2014

**ಸರ್ಕಾರದ ಆದೇಶ ಸಂಖ್ಯೆ: ಅಪಜೀ 109 ಎಫ್‌ಎಪಿ 2014**

**ಬೆಂಗಳೂರು, ದಿನಾಂಕ: 13-08-2014**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನಲೆಯಲ್ಲಿ ರಾಜ್ಯ ಸರ್ಕಾರವು 2014-15ನೇ ಸಾಲಿನಿಂದ ಜಾರಿಗೆ ಬರುವಂತೆ ಮಾನವ-ವನ್ಯಜೀವಿ ಸಂಘರ್ಷದಿಂದಾಗಿ ಹಸು, ಎತ್ತು, ಎಮ್ಮೆ, ಕೋಣಗಳು ಮೃತಪಟ್ಟಲ್ಲಿ ಅವುಗಳ ಮಾಲೀಕರಿಗೆ ನೀಡಲಾಗುತ್ತಿರುವ ಪರಿಹಾರ ಧನವನ್ನು ರೂ.10,000/- (ಹತ್ತು ಸಾವಿರ ರೂಪಾಯಿಗಳು ಮಾತ್ರ)ಕ್ಕೆ ಹೆಚ್ಚಿಸಲು ಹಾಗೂ ಮೇಕೆ, ಕುರಿಗಳು ಮೃತಪಟ್ಟಲ್ಲಿ ಅವುಗಳ ಮಾಲೀಕರಿಗೆ ನೀಡಲಾಗುತ್ತಿರುವ ಪರಿಹಾರ ಧನವನ್ನು ರೂ.5,000/- (ಐದು ಸಾವಿರ ರೂಪಾಯಿಗಳು ಮಾತ್ರ)ಗಳಿಗೆ ಹೆಚ್ಚಿಸಲು ಹಾಗೂ ಬೆಳೆ ಹಾನಿ ಉಂಟಾದಲ್ಲಿ ಸಂತ್ರಸ್ಥ ರೈತರಿಗೆ ನೀಡಲಾಗುತ್ತಿರುವ ಪರಿಹಾರದ ಧನದ ಗರಿಷ್ಟ ಮಿತಿಯನ್ನು ರೂ.50,000/- ರಿಂದ ರೂ.1,00,000/-(ಒಂದು ಲಕ್ಷ ರೂಪಾಯಿಗಳು ಮಾತ್ರ)ಗಳಿಗೆ ಹೆಚ್ಚಿಸಲು ಸರ್ಕಾರದ ಅನುಮೋದನೆ ನೀಡಲಾಗಿದೆ.

ಸಂತ್ರಸ್ಥರಿಗೆ ಪರಿಹಾರ ಮಂಜೂರಾತಿ ಸಂದರ್ಭದಲ್ಲಿ ಸರ್ಕಾರದ ಆದೇಶ ಸಂಖ್ಯೆ: ಅಪಜೀ 143 ಎಫ್‌ಡಬ್ಲ್ಯುಎಲ್ 2010 ದಿನಾಂಕ: 30-04-2011 ಮತ್ತು ಸರ್ಕಾರದ ಆದೇಶ ಸಂಖ್ಯೆ: ಅಪಜೀ 143 ಎಫ್‌ಡಬ್ಲ್ಯುಎಲ್ 2010 ದಿನಾಂಕ:03-08-2011ರಲ್ಲಿರುವ ಷರತ್ತು ಮತ್ತು ನಿರ್ಬಂಧನೆಗಳನ್ನು ಪಾಲಿಸತಕ್ಕದ್ದು.

ಸದರಿ ಪ್ರಸ್ತಾವನೆಗೆ ತಗಲುವ ವೆಚ್ಚವನ್ನು 2014-15ನೇ ಸಾಲಿನ ಲೆಕ್ಕ ಶೀರ್ಷಿಕೆ 2406-02-110-0-01-015(ಯೋಜನೇತರ)ರಡಿ ಭರಿಸತಕ್ಕದ್ದು.

ಸದರಿ ಆದೇಶವನ್ನು ಯೋಜನಾ ಇಲಾಖೆಯ ಟಿಪ್ಪಣಿ ಸಂಖ್ಯೆ: ಪಿಡಿ 21 ಪಿಎಫ್‌ಪಿ 2014, ದಿನಾಂಕ: 07.06.2014ರಲ್ಲಿ ನೀಡಿದ ಸಹಮತಿ ಮತ್ತು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 505 ವೆಚ್ಚ-5/ 2014, ದಿನಾಂಕ: 16.06.2014ರಲ್ಲಿ ನೀಡಿದ ಸಹಮತಿಗಳನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎಸ್.ಪಿ ಪಾಟೀಲ)
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

13/8/14

ಇವರಿಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು - 01 ಇವರಿಗೆ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲು ಕೋರಿದೆ.

1) ಮಹಾಲೇಖಪಾಲರು, (ಲೆಕ್ಕಪತ್ರ/ಲೆಕ್ಕ ಪರಿಶೋಧನೆ), ಕರ್ನಾಟಕ, ಬೆಂಗಳೂರು.
2) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅರಣ್ಯ ಪಡೆ ಮುಖ್ಯಸ್ಥರು), ಅರಣ್ಯ ಭವನ, ಮಲ್ಲೇಶ್ವರಂ. ಬೆಂಗಳೂರು.
3) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ, ಮಲ್ಲೇಶ್ವರಂ. ಬೆಂಗಳೂರು.
4) ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಅಭಿವೃದ್ಧಿ), ಅರಣ್ಯ ಭವನ, ಮಲ್ಲೇಶ್ವರಂ. ಬೆಂಗಳೂರು
5) ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಕೇಂದ್ರಸ್ಥಾನ ಮತ್ತು ಸಮನ್ವಯ)ಅರಣ್ಯ ಭವನ, ಮಲ್ಲೇಶ್ವರಂ. ಬೆಂಗಳೂರು.
6) ಸರ್ಕಾರದ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ(ಸಚಿವ ಸಂಪುಟ ಶಾಖೆ) ಇವರಿಗೆ (ಸಚಿವ ಸಂಪುಟದ ಪ್ರಕರಣ ಸಂಖ್ಯೆ: ಸಿ/441/2014, ದಿನಾಂಕ: 06-08-2014ರನ್ವಯ).
7) ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಪೋಡಿಯಂ ಬ್ಲಾಕ್, ಬೆಂಗಳೂರು.
8) ಎಲ್ಲಾ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ - ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳ ಮುಖಾಂತರ ರವಾನಿಸುವುದು.
9) ನಿರ್ದೇಶಕರು (ಪಿ.ಎಫ್.ಡಿ) ಯೋಜನಾ ಇಲಾಖೆ. ಬಹುಮಹಡಿಗಳ ಕಟ್ಟಡ, ಬೆಂಗಳೂರು.
10) ಉಪ ನಿರ್ದೇಶಕರು, ಗಣಕ ಅಂತರ್ ಜಾಲ, ಖಜಾನೆ ಇಲಾಖೆ, ಖನಿಜ ಭವನ, ಬೆಂಗಳೂರು.
11) ಮುಖ್ಯ ಮಂತ್ರಿಯವರ ಪ್ರಧಾನ ಕಾರ್ಯದರ್ಶಿಯವರು, ವಿಧಾನ ಸೌಧ, ಬೆಂಗಳೂರು.
12) ಮಾನ್ಯ ಅರಣ್ಯ ಸಚಿವರ ಆಪ್ತ ಕಾರ್ಯದರ್ಶಿಗಳು, ವಿಧಾನ ಸೌಧ, ಬೆಂಗಳೂರು.
13) ಸರ್ಕಾರದ ಅಧೀನ ಕಾರ್ಯದರ್ಶಿ, ಯೋಜನಾ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
14) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ(ವೆಚ್ಚ-5), ವಿಧಾನ ಸೌಧ, ಬೆಂಗಳೂರು.
15) ಸರ್ಕಾರದ ಅಧೀನ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ (ಸಮನ್ವಯ).
16) ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು/ ವಾರದ ಪತ್ರಿಕೆ.

(18)

# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಕಾಡು ಪ್ರಾಣಿಗಳ ದಾಳಿಯಿಂದ ಉಂಟಾದ ಮಾನವ ಪ್ರಾಣಹಾನಿ ಪ್ರಕರಣಗಳಲ್ಲಿ ಮೃತಪಟ್ಟವರ ವಾರಸುದಾರರಿಗೆ ನೀಡಲಾಗುತ್ತಿರುವ ಪರಿಹಾರದ ಧನದ ಮೊತ್ತವನ್ನು ಪರಿಷ್ಕರಿಸಿ ಹೆಚ್ಚಿಸುವ ಬಗ್ಗೆ.

*******

**ಓದಲಾಗಿದೆ:**

ಸರ್ಕಾರದ ಆದೇಶದ ಸಂಖ್ಯೆ: ಅಪಜೀ 143 ಎಫ್‌ಡಬ್ಲ್ಯುಎಲ್ 2010 ದಿನಾಂಕ: 30.04.2011.

**ಪ್ರಸ್ತಾವನೆ:**

ಮೇಲೆ ಓದಲಾದ ದಿನಾಂಕ: 30.04.2011 ರ ಸರ್ಕಾರಿ ಆದೇಶದಲ್ಲಿ ಕಾಡು ಪ್ರಾಣಿಗಳಿಂದ ಉಂಟಾದ ಮಾನವ ಪ್ರಾಣ ಹಾನಿ ಪ್ರಕರಣಗಳಲ್ಲಿ ಮೃತಪಟ್ಟ ವ್ಯಕ್ತಿಯು ಅರಣ್ಯ ಪ್ರದೇಶಗಳಲ್ಲಿ ಕಾನೂನು ಬಾಹಿರ ಚಟುವಟಿಕೆಯಲ್ಲಿ ತೊಡಗಿಲ್ಲವೆಂದೂ ಹಾಗೂ ಮರಣೋತ್ತರ ಪರೀಕ್ಷೆಯ ವರದಿಯಲ್ಲಿ ಸದರಿ ವ್ಯಕ್ತಿಯು ವನ್ಯ ಮೃಗಗಳಿಂದ ಮೃತನಾಗಿದ್ದಾನೆಂದು ದೃಢಪಟ್ಟಿದ್ದರೆ, ಮರಣ ಹೊಂದಿದ ವ್ಯಕ್ತಿಯ ವಾರಸುದಾರರಿಗೆ ರೂ.3.50 ಲಕ್ಷಗಳನ್ನು ಮಂಜೂರು ಮಾಡಲು ಆದೇಶ ನೀಡಲಾಗಿತ್ತು ಹಾಗೂ ಈ ಪರಿಹಾರ ಧನವನ್ನು ಮಂಜೂರು ಮಾಡಲು ಕ್ಷೇತ್ರ ವ್ಯಾಪ್ತಿಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ಅರಣ್ಯ ಸಂರಕ್ಷಣಾಧಿಕಾರಿ/ಉಪ ಅರಣ್ಯ ಸಂರಕ್ಷಣಾಧಿಕಾರಿಯವರಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿತ್ತು.

2. ಈಗ ಸರ್ಕಾರವು ಮೇಲ್ಕಂಡ ಆದೇಶವನ್ನು ಪುನರ್ ಪರಿಶೀಲಿಸಿ ಈ ಕೆಳಗಿನಂತೆ ಆದೇಶ ಹೊರಡಿಸಿದೆ.

## ಸರ್ಕಾರದ ಆದೇಶ ಸಂಖ್ಯೆ: ಅಪಜೀ 143 ಎಫ್‌ಡಬ್ಲ್ಯುಎಲ್ 2010
## ಬೆಂಗಳೂರು. ದಿನಾಂಕ: 03/08/2011

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಕಾಡು ಪ್ರಾಣಿಗಳಿಂದ ಉಂಟಾದ ಮಾನವ ಪ್ರಾಣ ಹಾನಿ ಪ್ರಕರಣಗಳಲ್ಲಿ ಮೃತಪಟ್ಟ ವ್ಯಕ್ತಿಯು ಅರಣ್ಯ ಪ್ರದೇಶಗಳಲ್ಲಿ ಕಾನೂನು ಬಾಹಿರ ಚಟುವಟಿಕೆಯಲ್ಲಿ ತೊಡಗಿಲ್ಲವೆಂದೂ ಹಾಗೂ ಮರಣೋತ್ತರ ಪರೀಕ್ಷೆಯ ವರದಿಯಲ್ಲಿ ಸದರಿ ವ್ಯಕ್ತಿಯು ವನ್ಯ ಮೃಗಗಳಿಂದ ಮೃತನಾಗಿದ್ದಾನೆಂದು ದೃಢಪಟ್ಟಲ್ಲಿ ಮರಣ ಹೊಂದಿದ ವ್ಯಕ್ತಿಯ ವಾರಸುದಾರರಿಗೆ ರೂ.5.00 ಲಕ್ಷಗಳ (ರೂಪಾಯಿಗಳು ಐದು ಲಕ್ಷಗಳು ಮಾತ್ರ) ದಯಾತ್ಮಕ ಧನವನ್ನು ದಿನಾಂಕ: 08.06.2011 ರಿಂದ ಪೂರ್ವಾನ್ವಯವಾಗಿ ಜಾರಿಗೆ ಬರುವಂತೆ ಈ ಕೆಳಕಂಡ ಷರತ್ತುಗಳಿಗೊಳಪಟ್ಟು ಮಂಜೂರು ಮಾಡಲು ಆದೇಶಿಸಲಾಗಿದೆ.

(ಅ) ಹೀಗೆ ಮಂಜೂರು ಮಾಡಲಾದ ದಯಾತ್ಮಕ ಧನದಲ್ಲಿ ರೂ.2.00 ಲಕ್ಷಗಳನ್ನು ಘಟನೆ ನಡೆದ ತಕ್ಷಣವೇ ವಾರಸುದಾರರಿಗೆ ನೀಡತಕ್ಕದ್ದು.

(ಆ) ಉಳಿದ ಮೊತ್ತ ರೂ.3.00 ಲಕ್ಷಗಳನ್ನು ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಹಂತದಲ್ಲಿ ವಿಚಾರಣೆ ನಡೆಸಿ ವಾರಸುದಾರರಿಗೆ ಬಿಡುಗಡೆ ಮಾಡತಕ್ಕದ್ದು.

..2

2. ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 970 ವೆಚ್ಚ-5/2011, ದಿನಾಂಕ: 30.07.2011 ರನ್ವಯ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಎ.ಬಿ.ರಾಮಕೃಷ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಗೆ,

ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಹಾಗೂ ಈ ಆದೇಶದ 500 ಪ್ರತಿಗಳನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು – 560 003 ಇವರಿಗೆ ಒದಗಿಸಲು ಹಾಗೂ 250 ಪ್ರತಿಗಳನ್ನು ಮೇಲೆ ಸಹಿ ಮಾಡಿದವರಿಗೆ ಒದಗಿಸಲು ಕೋರಿದೆ.

<u>ಪ್ರತಿಗಳು:</u>

1. ಪ್ರಧಾನ ಮಹಾಲೇಖಪಾಲರು, (ಲೆಕ್ಕಪತ್ರ/ಲೆಕ್ಕಪರಿಶೋಧನೆ) ಕರ್ನಾಟಕ, ಬೆಂಗಳೂರು.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
4. ಎಲ್ಲಾ ಅಪರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು/ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು/ಅರಣ್ಯ ಸಂರಕ್ಷಣಾಧಿಕಾರಿಗಳು/ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಾದೇಶಿಕ/ವನ್ಯಜೀವಿ)/ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಬೆಂಗಳೂರು ಇವರ ಮುಖಾಂತರ).
5. ರಾಜ್ಯ ವನ್ಯಜೀವಿ ಮಂಡಳಿಯ ಉಪಾಧ್ಯಕ್ಷರ ಆಪ್ತ ಕಾರ್ಯದರ್ಶಿಗಳು, ವಿ.ವಿ.ಗೋಪುರ, ಡಾ:ಅಂಬೇಡ್ಕರ್ ರಸ್ತೆ, ಬೆಂಗಳೂರು-1.
6. ಮಾನ್ಯ ಅರಣ್ಯ ಮತ್ತು ಸಣ್ಣ ಕೈಗಾರಿಕಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-5), ವಿಧಾನಸೌಧ, ಬೆಂಗಳೂರು.
8. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

# ಕರ್ನಾಟಕ ಸರ್ಕಾರದ ನಡವಳಿಗಳು

17

ವಿಷಯ: ಕಾಡು ಪ್ರಾಣಿಗಳ ಹಾವಳಿಯಿಂದ ಬೆಳೆನಾಶ, ಮಾನವನ ಪ್ರಾಣಹಾನಿ, ಶಾಶ್ವತ ಅಂಗವಿಕಲತೆ, ಸಾಕುಪ್ರಾಣಿಗಳ ಪ್ರಾಣಹಾನಿ, ಆಸ್ತಿಪಾಸ್ತಿ ಹಾನಿ ಹಾಗೂ ಗಾಯಗೊಂಡವರಿಗೆ ನೀಡಲಾಗುತ್ತಿರುವ ಪರಿಹಾರದ ಮೊತ್ತ ನಿಗಧಿ ಪಡಿಸುವ ಬಗ್ಗೆ.

*******

**ಓದಲಾಗಿದೆ:**

1) ಸರ್ಕಾರದ ಆದೇಶದ ಸಂಖ್ಯೆ: ಅಪಜೀ 52 ಎಫ್‌ಡಬ್ಲ್ಯುಎಲ್ 96, ದಿನಾಂಕ: 12-02-2002.
2) ಸರ್ಕಾರದ ಆದೇಶದ ಸಂಖ್ಯೆ: ಅಪಜೀ 259 ಎಫ್‌ಡಬ್ಲ್ಯುಎಲ್ 2006, ದಿನಾಂಕ: 17-01-2007.
3) ಸರ್ಕಾರದ ತಿದ್ದುಪಡಿ ಸಂಖ್ಯೆ: ಅಪಜೀ 162 ಎಫ್‌ಡಬ್ಲ್ಯುಎಲ್ 2008, ದಿನಾಂಕ: 05.06.2009.
4) ಸರ್ಕಾರದ ಆದೇಶದ ಸಂಖ್ಯೆ: ಅಪಜೀ 70 ಎಫ್‌ಡಬ್ಲ್ಯುಎಲ್ 2009, ದಿನಾಂಕ: 10-08-2010.
5) ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ), ಬೆಂಗಳೂರು ಇವರ ಪತ್ರ ಸಂಖ್ಯೆ: ಸಿ2/ವಜೀ/ಸಿಆರ್-40/2010-11, ದಿನಾಂಕ: 13.12.2010.

**ಪ್ರಸ್ತಾವನೆ:**

ಮೇಲೆ (1) ರಲ್ಲಿ ಓದಲಾದ ದಿನಾಂಕ: 12.02.2002 ರ ಸರ್ಕಾರಿ ಆದೇಶದಲ್ಲಿ ವನ್ಯಪ್ರಾಣಿಗಳಿಂದ ಬೆಳೆ ನಾಶ, ಮಾನವ ಪ್ರಾಣ ಹಾನಿ, ಸಾಕು ಪ್ರಾಣಿಗಳ ಪ್ರಾಣ ಹಾನಿ, ಶಾಶ್ವತ ಅಂಗವಿಕಲತೆ, ಗಾಯಗೊಂಡ ಹಾಗೂ ಆಸ್ತಿಪಾಸ್ತಿ ನಷ್ಟ ಪ್ರಕರಣಗಳಿಗೆ ಸಂಬಂಧಿಸಿದಂತೆ ದಯಾತ್ಮಕ ಧನವನ್ನು ಪಾವತಿಸಲಾಗುತ್ತಿದ್ದು, ಮಾನವ ಪ್ರಾಣ ಹಾನಿ ಪ್ರಕರಣಗಳಲ್ಲಿ ಮೃತರ ವಾರಸುದಾರರಿಗೆ ರೂ.1.00 ಲಕ್ಷಗಳ ದಯಾತ್ಮಕ ಧನವನ್ನು ನೀಡುವ ಕುರಿತು ಹಾಗೂ ಪರಿಹಾರ ವಿತರಿಸಲು ಅರಣ್ಯ ಇಲಾಖೆಯ ಕ್ಷೇತ್ರಾಧಿಕಾರಿಗಳಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಿ ಮಂಜೂರಾತಿ ಆದೇಶ ನೀಡಲಾಗಿದೆ.

2. ಮೇಲೆ (2) ರಲ್ಲಿ ಓದಲಾದ ದಿನಾಂಕ: 17.01.2007 ರ ಸರ್ಕಾರಿ ಆದೇಶದಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾದ ಬೆಳೆ ನಾಶ, ಮಾನವ ಪ್ರಾಣ ಹಾನಿ, ಸಾಕು ಪ್ರಾಣಿಗಳ ಪ್ರಾಣಹಾನಿ, ಶಾಶ್ವತ ಅಂಗವಿಕಲತೆ, ಗಾಯಗೊಂಡ ಹಾಗೂ ಆಸ್ತಿ ನಷ್ಟ ಪ್ರಕರಣಗಳಿಗೆ ಸಂಬಂಧಿಸಿದಂತೆ ದಯಾತ್ಮಕ ಧನವನ್ನು ಪಾವತಿಸಲಾಗುತ್ತಿದ್ದು, ಮಾನವ ಪ್ರಾಣ ಹಾನಿ ಪ್ರಕರಣಗಳಲ್ಲಿ ಮೃತರ ವಾರಸುದಾರರಿಗೆ ರೂ.1.50 ಲಕ್ಷಗಳ ದಯಾತ್ಮಕ ಧನವನ್ನು ಪಾವತಿಸಲಾಗುತ್ತಿದೆ.

3. ಮೇಲೆ (3) ರಲ್ಲಿ ಓದಲಾದ ದಿನಾಂಕ: 05.06.2009 ರ ತಿದ್ದುಪಡಿ ಆದೇಶದಲ್ಲಿ ರೂ.5,800-00ರ ವರೆಗಿನ ಮೊತ್ತದ ಬೆಳೆನಾಶಕ್ಕೆ ಭೂ ಮಾಲೀಕರಿಗೆ ಗರಿಷ್ಠ ಮೊತ್ತವನ್ನು ರೂ.45,000-00 ಗಳಿಗೆ ನಿಗದಿಪಡಿಸಿ ಆದೇಶ ಹೊರಡಿಸಲಾಗಿದೆ.

4. ಮೇಲೆ (4) ರಲ್ಲಿ ಓದಲಾದ ದಿನಾಂಕ: 10.08.2010 ರ ಆದೇಶದಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಮಾನವ ಪ್ರಾಣ ಹಾನಿ ಪ್ರಕರಣಗಳಲ್ಲಿ ಮೃತರ ವಾರಸುದಾರರಿಗೆ ಪಾವತಿಸಲಾಗುತ್ತಿರುವ ದಯಾತ್ಮಕ ಧನದ ಮೊತ್ತವನ್ನು ರೂ.2.00 ಲಕ್ಷಗಳಿಗೆ ಹೆಚ್ಚಿಸಿ ಆದೇಶ ಹೊರಡಿಸಲಾಗಿದೆ.

..2

5. ಮೇಲೆ (5) ರಲ್ಲಿ ಓದಲಾದ ದಿನಾಂಕ: 13.12.2010 ರ ಪತ್ರದಲ್ಲಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ(ವನ್ಯಜೀವಿ) ಇವರು ದಿನಾಂಕ: 10.12.2010 ರಂದು ಮಾನ್ಯ ಅರಣ್ಯ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ರಾಜ್ಯದಲ್ಲಿ ಮಾನವ – ವನ್ಯಪ್ರಾಣಿ ಸಂಘರ್ಷದ ಬಗ್ಗೆ ಚರ್ಚಿಸಿ ತೆಗೆದುಕೊಂಡ ನಿರ್ಣಯದನುಸಾರ ಪರಿಹಾರ ಧನ ಹೆಚ್ಚಿಸುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

6. ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ಈ ಹಿಂದಿನ ಎಲ್ಲಾ ಆದೇಶಗಳನ್ನು ರದ್ದುಪಡಿಸಿ ಒಂದೇ ಸರ್ಕಾರಿ ಆದೇಶ ಹೊರಡಿಸಬೇಕಾಗಿರುತ್ತದೆ. ಆದ್ದರಿಂದ ಈ ಕೆಳಗಿನಂತೆ ಆದೇಶ ಹೊರಡಿಸಲಾಗಿದೆ.

**<u>ಸರ್ಕಾರದ ಆದೇಶ ಸಂಖ್ಯೆ: ಅಪಜೀ 143 ಎಫ್‌ಡಬ್ಲ್ಯುಎಲ್ 2010</u>**
**<u>ಬೆಂಗಳೂರು. ದಿನಾಂಕ: 30/04/2011</u>**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಬೆಳೆ ನಾಶ, ಮಾನವ ಪ್ರಾಣಹಾನಿ, ಸಾಕು ಪ್ರಾಣಿಗಳ ಪ್ರಾಣ ಹಾನಿ, ಶಾಶ್ವತ ಅಂಗವಿಕಲತೆ, ಗಾಯಗೊಂಡವರಿಗೆ ಹಾಗೂ ಆಸ್ತಿಪಾಸ್ತಿ ನಷ್ಟಕ್ಕೆ ಸಂಬಂಧಿಸಿದಂತೆ ಈ ಕೆಳಗಿನಂತೆ ಪರಿಹಾರ ಮೊತ್ತವನ್ನು ನಿಗಧಿಪಡಿಸಿ ವಿತರಿಸಲು ಅರಣ್ಯ ಇಲಾಖೆಯ ಕ್ಷೇತ್ರ ಅಧಿಕಾರಿಗಳಿಗೆ ಆರ್ಥಿಕ ಅಧಿಕಾರ ಪ್ರತ್ಯಾಯೋಜಿಸಿ ಮಂಜೂರಾತಿ ನೀಡಲಾಗಿದೆ. ಈ ಆದೇಶವು ತಕ್ಷಣದಿಂದಲೇ ಹಾಗೂ ಮುಂದಿನ ಆದೇಶದ ವರೆಗೆ ಜಾರಿಯಲ್ಲಿರುತ್ತದೆ.

**I) ಕಾಡು ಪ್ರಾಣಿಗಳಿಂದ ಉಂಟಾದ ಬೆಳೆನಾಶಕ್ಕೆ ಸಂಬಂಧಿಸಿದ ಮಾಲೀಕರಿಗೆ ಮಂಜೂರು ಮಾಡುವ ಪರಿಹಾರ:-**

| ಕ್ರ. ಸಂ. | ವಿವರಗಳು | ವಿತರಿಸಲಾಗುವ ಪರಿಹಾರ | ಮಂಜೂರಾತಿ ಪ್ರಾಧಿಕಾರ | |
|---|---|---|---|---|
| | | | ಹೆಸರು | ಮೊತ್ತ |
| 1. | ವನ್ಯಪ್ರಾಣಿಗಳಿಂದ ಉಂಟಾಗುವ ಬೆಳೆ ಹಾನಿ | (ಅ) ರೂ.7,500/- ಗಳವರೆಗಿನ ಮೊತ್ತದ ಬೆಳೆ ನಾಶಕ್ಕೆ ಭೂ ಮಾಲೀಕರಿಗೆ ಮಂಜೂರು ಮಾಡುವ ದಯಾತ್ಮಕ ಧನ ಬೆಳೆ ನಾಶದ ಪೂರ್ಣ ಮೊತ್ತ | ಪ್ರತಿ ವರ್ಷದಲ್ಲಿ ರೂ.1.00 ಲಕ್ಷಗಳ ವರೆಗಿನ ಬೆಳೆ ನಾಶಕ್ಕೆ ಪರಿಹಾರ ನಿಗಧಿಪಡಿಸಿ ಮಂಜೂರು ಮಾಡುವ ಅಧಿಕಾರವನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಹಾಗೂ ರೂ.1.00 ಲಕ್ಷಗಳಿಗಿಂತ ಹೆಚ್ಚಿನ ಬೆಳೆನಾಶಕ್ಕೆ ಮೌಲ್ಯಮಾಪನ ಮಾಡಿ ಪರಿಹಾರ ಧನ ನಿಗಧಿಪಡಿಸಿ ಪಾವತಿಸಲು ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ/ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ/ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜಿಸಿದೆ. | ಪ್ರತಿ ಪ್ರಕರಣಕ್ಕೆ ಗರಿಷ್ಟ ಮೊತ್ತ ರೂ.7,500/-ಗಳು |

(18)

| | | | | |
|---|---|---|---|---|
| | | (ಅ) ರೂ.7,500/- ಗಳಿಗೆ ಮೇಲ್ಪಟ್ಟ ಹಾಗೂ ರೂ.35,000/- ಗಳವರೆಗಿನ ಮೊತ್ತದ ಬೆಳೆ ನಾಶಕ್ಕೆ ಶೇಕಡ 50 ರಷ್ಟು ಪರಿಹಾರ ಧನ ಕನಿಷ್ಟ ರೂ.7,500/- ಮತ್ತು ಗರಿಷ್ಟ ರೂ.21,250/- | ಪ್ರತಿ ವರ್ಷಕ್ಕೆ ರೂ.1.00 ಲಕ್ಷಗಳ ವರೆಗಿನ ಬೆಳೆ ನಾಶಕ್ಕೆ ಪರಿಹಾರ ನಿಗಧಿಪಡಿಸಿ ಮಂಜೂರು ಮಾಡುವ ಅಧಿಕಾರವನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಹಾಗೂ ರೂ.1.00 ಲಕ್ಷಗಳಿಗಿಂತ ಹೆಚ್ಚಿನ ಬೆಳೆನಾಶಕ್ಕೆ ಮೌಲ್ಯಮಾಪನ ಮಾಡಿ ಪರಿಹಾರ ಧನ ನಿಗಧಿಪಡಿಸಿ ಪಾವತಿಸಲು ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ/ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ/ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜಿಸಿದೆ. | ಪ್ರತಿ ಪ್ರಕರಣಕ್ಕೆ ಗರಿಷ್ಟ ರೂ. 21,250/-ಗಳು |
| | | (ಇ) ರೂ.35,000/- ಗಳಿಗೆ ಮೇಲ್ಪಟ್ಟ ಬೆಳೆನಾಶಕ್ಕೆ ಶೇಕಡ 30 ರಷ್ಟು ಪರಿಹಾರ, ಕನಿಷ್ಟ ರೂ.21,250/- ಮತ್ತು ಗರಿಷ್ಟ ರೂ.50,000/- ಗಳು | ಕ್ಷೇತ್ರ ವ್ಯಾಪ್ತಿಯ ಅರಣ್ಯ ಸಂರಕ್ಷಣಾಧಿಕಾರಿ/ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ | ಪ್ರತಿ ಪ್ರಕರಣಕ್ಕೆ ಕನಿಷ್ಟ ರೂ.21,250/- ಮತ್ತು ಗರಿಷ್ಟ ಮೊತ್ತ ರೂ.50,000/- ಗಳು |

**ಷರತ್ತು:** ಮೇಲಿನ ಪ್ರಕರಣಗಳಲ್ಲಿ ಒತ್ತುವರಿಗೊಂಡ ಅರಣ್ಯ ಭೂಮಿಯಲ್ಲಿ ಬೆಳೆಯಲಾದ ಬೆಳೆಗಳು ಕಾಡು ಪ್ರಾಣಿಗಳಿಂದ ಹಾನಿಗೊಂಡಲ್ಲಿ ಅಂಥ ಬೆಳೆ ನಷ್ಟಕ್ಕೆ ಪರಿಹಾರ ಧನ ನೀಡಲಾಗುವುದಿಲ್ಲ.

**II) ಕಾಡು ಪ್ರಾಣಿಗಳಿಂದ ದನಕರುಗಳ ಪ್ರಾಣ ಹಾನಿಯಾದ ಪ್ರಕರಣಗಳಿಗೆ ಮಂಜೂರು ಮಾಡಬಹುದಾದ ಪರಿಹಾರ ಧನ:-**

| ಕ್ರ. ಸಂ. | ವಿವರಗಳು | ವಿತರಿಸಲಾಗುವ ಪರಿಹಾರ ಧನ | ಮಂಜೂರಾತಿ ಪ್ರಾಧಿಕಾರ | |
|---|---|---|---|---|
| | | | ಹೆಸರು | ಮೊತ್ತ |
| 1. | ನಿಷೇಧಿಸಲ್ಪಟ್ಟ ಮೇವು ಪ್ರದೇಶಗಳನ್ನು ಹೊರತು ಪಡಿಸಿ ಉಳಿದ ಪ್ರದೇಶಗಳಲ್ಲಿ ವನ್ಯಜೀವಿಗಳಿಂದ ಹತ್ಯೆಯಾದ ಸಾಕು ಪ್ರಾಣಿಗಳ ವಾರಸುದಾರರಿಗೆ ಮಂಜೂರು ಮಾಡುವ ಪರಿಹಾರ ಧನ | ಪ್ರತಿ ಪ್ರಾಣಿಯ ಹತ್ಯೆಗೆ ಕನಿಷ್ಟ ಮೊತ್ತ ರೂ.2,500/- ಗರಿಷ್ಟ 3,000/-ಗಳು | ಕ್ಷೇತ್ರ ವ್ಯಾಪ್ತಿಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ ಅರಣ್ಯ ಸಂರಕ್ಷಣಾಧಿಕಾರಿ/ ಉಪ ಅರಣ್ಯ ಸಂರಕ್ಷಣಾಧಿಕಾರಿ. | ಪ್ರತಿ ಸಾಕು ಪ್ರಾಣಿಯ ಹತ್ಯೆಗೆ ಕನಿಷ್ಟ ರೂ.2,500/- ಹಾಗೂ ಗರಿಷ್ಟ ರೂ.3,000/- |

**III) ಕಾಡು ಪ್ರಾಣಿಗಳಿಂದ ಮಾನವ ಪ್ರಾಣ ಹಾನಿ ಪ್ರಕರಣಗಳಿಗೆ ಮಂಜೂರಾತಿ ಮಾಡುವ ಪರಿಹಾರ ಧನ:-**

| ಕ್ರ. ಸಂ. | ವಿವರಗಳು | ವಿತರಿಸಲಾಗುವ ಪರಿಹಾರ ಧನ | ಮಂಜೂರಾತಿ ಪ್ರಾಧಿಕಾರ | |
|---|---|---|---|---|
| | | | ಹೆಸರು | ಮೊತ್ತ |
| 1. | ವನ್ಯಪ್ರಾಣಿಯಿಂದ ಹತ್ಯೆಯಾದ ವ್ಯಕ್ತಿಯು ಅರಣ್ಯ ಪ್ರದೇಶಗಳಲ್ಲಿ ಕಾನೂನು ಬಾಹಿರ ಚಟುವಟಿಕೆಯಲ್ಲಿ ತೊಡಗಿಲ್ಲವೆಂದು ಹಾಗೂ ಮರಣೋತ್ತರ ಪರೀಕ್ಷೆಯ ವರದಿಯಲ್ಲಿ ಸದರಿ ವ್ಯಕ್ತಿಯು ವನ್ಯ ಮೃಗಗಳಿಂದ ಮೃತನಾಗಿದ್ದಾನೆಂದು ದೃಢಪಟ್ಟಿದ್ದರೆ, ಸತ್ತ ವ್ಯಕ್ತಿಯ ವಾರಸುದಾರರಿಗೆ ಮಂಜೂರು ಮಾಡುವ ಪರಿಹಾರ ಧನ | ರೂ.3.50 ಲಕ್ಷಗಳು (ಮೂರು ಲಕ್ಷದ ಐವತ್ತು ಸಾವಿರಗಳು ಮಾತ್ರ) | ಕ್ಷೇತ್ರ ವ್ಯಾಪ್ತಿಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ ಅರಣ್ಯ ಸಂರಕ್ಷಣಾಧಿಕಾರಿ / ಉಪ ಅರಣ್ಯ ಸಂರಕ್ಷಣಾಧಿಕಾರಿ. | ಮೃತಪಟ್ಟ ಪ್ರತಿ ವ್ಯಕ್ತಿಗೆ ರೂ.3.50 ಲಕ್ಷಗಳು (ರೂಪಾಯಿ ಮೂರು ಲಕ್ಷದ ಐವತ್ತು ಸಾವಿರಗಳು ಮಾತ್ರ) |

..5

15

| IV) ಕಾಡು ಪ್ರಾಣಿಗಳಿಂದ ಶಾಶ್ವತ ಅಂಗವಿಕಲತೆಯಾದ ಪ್ರಕರಣಗಳಿಗೆ ಮಂಜೂರು ಮಾಡುವ ಪರಿಹಾರ ಧನ:- | | | | |
|---|---|---|---|---|
| ಕ್ರ. ಸಂ. | ವಿವರಗಳು | ವಿತರಿಸಲಾಗುವ ಪರಿಹಾರ ಧನ | ಮಂಜೂರಾತಿ ಪ್ರಾಧಿಕಾರ | |
| | | | ಹೆಸರು | ಮೊತ್ತ |
| 1. | ವನ್ಯಪ್ರಾಣಿಯಿಂದ ಶಾಶ್ವತ ಅಂಗವಿಕಲತೆಗೆ ಒಳಗಾಗುವ ವ್ಯಕ್ತಿಯು ಅರಣ್ಯ ಪ್ರದೇಶಗಳಲ್ಲಿ ಕಾನೂನು ಬಾಹಿರ ಚಟುವಟಿಕೆಯಲ್ಲಿ ತೊಡಗಿಲ್ಲವೆಂದೂ, ಮತ್ತು ಜಿಲ್ಲಾ ಶಸ್ತ್ರ ಚಿಕಿತ್ಸ ತಜ್ಞರು ಅಥವಾ ಜಿಲ್ಲಾ ವೈದ್ಯಕೀಯ ಅಧಿಕಾರಿ ಮಟ್ಟದ ವೈದ್ಯರಿಂದ ಪಡೆದ ವೈದ್ಯಕೀಯ ಪ್ರಮಾಣ ಪತ್ರದ ಆಧಾರದ ಮೇಲೆ ವನ್ಯಪ್ರಾಣಿಯಿಂದ ಶಾಶ್ವತವಾಗಿ ಅಂಗವಿಕಲತೆ (permanent disability) ಉಂಟಾಗಿದೆ ಎಂದು ದೃಢೀಕರಿಸಿದ ವ್ಯಕ್ತಿಗೆ ಮಂಜೂರು ಮಾಡುವ ಪರಿಹಾರ ಧನ | ಪ್ರತಿಯೊಬ್ಬ ಊನಗೊಂಡಿರುವ ವ್ಯಕ್ತಿಗೆ ಗರಿಷ್ಠ ಮೊತ್ತ ರೂ.50,000/- (ರೂಪಾಯಿ ಐವತ್ತು ಸಾವಿರಗಳು) | ಕ್ಷೇತ್ರ ವ್ಯಾಪ್ತಿಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ ಅರಣ್ಯ ಸಂರಕ್ಷಣಾಧಿಕಾರಿ / ಉಪ ಅರಣ್ಯ ಸಂರಕ್ಷಣಾಧಿಕಾರಿ. | ಪ್ರತಿಯೊಬ್ಬ ಊನಗೊಂಡಿರುವ ವ್ಯಕ್ತಿಗೆ ಗರಿಷ್ಠ ಮೊತ್ತ ರೂ.50,000/- (ರೂಪಾಯಿ ಐವತ್ತು ಸಾವಿರಗಳು) |

**V) ಕಾಡು ಪ್ರಾಣಿಗಳಿಂದ ಗಾಯಗೊಂಡವರಿಗೆ ಮಂಜೂರು ಮಾಡುವ ಪರಿಹಾರ ಧನ:-**

| ಕ್ರ. ಸಂ. | ವಿವರಗಳು | ವಿತರಿಸಲಾಗುವ ಪರಿಹಾರ ಧನ | ಮಂಜೂರಾತಿ ಪ್ರಾಧಿಕಾರ | |
|---|---|---|---|---|
| | | | ಹೆಸರು | ಮೊತ್ತ |
| 1. | ವನ್ಯಪ್ರಾಣಿಯಿಂದ ಗಾಯಗೊಳ್ಳುವಾಗ ವ್ಯಕ್ತಿಯು ಅರಣ್ಯ ಪ್ರದೇಶದಲ್ಲಿ ಕಾನೂನು ಬಾಹಿರ ಚಟುವಟಿಕೆಯಲ್ಲಿ ನಿರತನಾಗಿರದೇ ಇದ್ದು ಹಾಗೂ ವೈದ್ಯಕೀಯ ಅಧಿಕಾರಿಯಿಂದ ಗಾಯಗೊಂಡ ವ್ಯಕ್ತಿಯು ಶುಶ್ರೂಷೆ ಪಡೆದ ಬಗ್ಗೆ ವೈದ್ಯಕೀಯ ಪ್ರಮಾಣ ಪತ್ರದ ಆಧಾರದ ಮೇಲೆ ಗಾಯಗೊಂಡ ವ್ಯಕ್ತಿಗೆ ಮಂಜೂರು ಮಾಡುವ ಪರಿಹಾರ ಧನ | ಗಾಯಗೊಂಡ ಪ್ರತಿ ವ್ಯಕ್ತಿಗೆ ಗರಿಷ್ಟ ಮೊತ್ತ ರೂ.20,000/- ಗಳು (ರೂಪಾಯಿ ಇಪ್ಪತ್ತು ಸಾವಿರಗಳು ಮಾತ್ರ) | ಅ)ಕ್ಷೇತ್ರ ವ್ಯಾಪ್ತಿಯ ಉಪ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಸ್ವತಂತ್ರವಾಗಿ ಕೆಲಸ ನಿರ್ವಹಿಸುತ್ತಿರುವ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ.<br>ಆ)ಕ್ಷೇತ್ರ ವ್ಯಾಪ್ತಿಯ ಅರಣ್ಯ ಸಂರಕ್ಷಣಾಧಿಕಾರಿ/ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ. | ಅ) ಗಾಯಗೊಂಡ ಪ್ರತಿ ವ್ಯಕ್ತಿಗೆ ರೂ.5,000/- (ರೂಪಾಯಿ ಐದು ಸಾವಿರ ಮಾತ್ರ)<br>ಆ) ಪ್ರತಿ ಪ್ರಕರಣಕ್ಕೆ ಗರಿಷ್ಟ ರೂ.20,000/- ಗಳು (ರೂಪಾಯಿ ಇಪ್ಪತ್ತು ಸಾವಿರಗಳು ಮಾತ್ರ) |

**VI) ಕಾಡಾನೆಗಳ ದಾಳಿಯಿಂದ ಉಂಟಾದ ಆಸ್ತಿ ನಷ್ಟಕ್ಕೆ ಮಂಜೂರು ಮಾಡುವ ಪರಿಹಾರ ಧನ:-**

| ಕ್ರ. ಸಂ. | ವಿವರಗಳು | ವಿತರಿಸಲಾಗುವ ಪರಿಹಾರ ಧನ | ಮಂಜೂರಾತಿ ಪ್ರಾಧಿಕಾರ | |
|---|---|---|---|---|
| | | | ಹೆಸರು | ಮೊತ್ತ |
| 1. | ಕಾಡಾನೆಗಳ ಹಾವಳಿಯಿಂದ ನಷ್ಟಕ್ಕೊಳಗಾದ ಆಸ್ತಿ ಅಂದರೆ ಮನೆಗಳು, ಶೆಡ್ಡುಗಳು, ಪಂಪ್‌ಹೌಸ್‌ಗಳು, ಪೈಪ್‌ಲೈನ್‌ಗಳು, ಬೇಲಿಗಳು ಇತ್ಯಾದಿ ಕಳೆದುಕೊಂಡ ವಾರಸುದಾರರಿಗೆ ಮಂಜೂರು ಮಾಡುವ ಪರಿಹಾರ ಧನ | ಪ್ರತಿ ಪ್ರಕರಣಕ್ಕೆ ರೂ.7,000/- (ರೂಪಾಯಿ ಏಳು ಸಾವಿರಗಳು ಮಾತ್ರ) ಗಳ ಗರಿಷ್ಟ ಮೊತ್ತ | ಕ್ಷೇತ್ರ ವ್ಯಾಪ್ತಿಯ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ/ ಅರಣ್ಯ ಸಂರಕ್ಷಣಾಧಿಕಾರಿ /ಉಪ ಅರಣ್ಯ ಸಂರಕ್ಷಣಾಧಿಕಾರಿ ಹಾಗೂ ಸ್ವತಂತ್ರವಾಗಿ ಕೆಲಸ ನಿರ್ವಹಿಸುತ್ತಿರುವ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿ. | ಪ್ರತಿ ಪ್ರಕರಣಕ್ಕೆ ರೂ.7,000/- (ರೂಪಾಯಿ ಏಳು ಸಾವಿರಗಳು ಮಾತ್ರ) ಗಳ ಗರಿಷ್ಟ ಮೊತ್ತ |

**2. ಈ ಆದೇಶವನ್ನು ಈ ಕೆಳಕಂಡ ಷರತ್ತುಗಳಿಗನುಗುಣವಾಗಿ ಹೊರಡಿಸಲಾಗಿದೆ:-**

1. ಒತ್ತುವರಿಗೊಂಡ ಅರಣ್ಯ ಭೂಮಿಯಲ್ಲಿರುವ ಆಸ್ತಿಯು ವನ್ಯಪ್ರಾಣಿಯಿಂದ ನಷ್ಟವಾದಲ್ಲಿ ಅಂಥ ಆಸ್ತಿಯ ನಷ್ಟಕ್ಕೆ ಪರಿಹಾರ ನೀಡಲಾಗುವುದಿಲ್ಲ.
2. ಮಾನವ ಪ್ರಾಣ ಹಾನಿಗೆ ನಿಗಧಿಪಡಿಸಲಾದ ಪರಿಹಾರ ಧನದ ಮೊತ್ತ ರೂ.3.50 ಲಕ್ಷಗಳಲ್ಲಿ ರೂ.1.50 ಲಕ್ಷಗಳನ್ನು ಘಟನೆ ನಡೆದ ತಕ್ಷಣವೇ ವಾರಸುದಾರರಿಗೆ ಪಾವತಿಸತಕ್ಕದ್ದು ಹಾಗೂ ಉಳಿದ ಮೊತ್ತವನ್ನು ಕ್ಷೇತ್ರ ವ್ಯಾಪ್ತಿಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಹಂತದಲ್ಲಿ ಅಥವಾ ಅದಕ್ಕಿಂತ ಮೇಲ್ಪಟ್ಟ ಅಧಿಕಾರಿಗಳಿಂದ ವಿಚಾರಣೆ ನಡೆಸಿ ವಾರಸುದಾರರಿಗೆ ಪಾವತಿಸತಕ್ಕದ್ದು.

...7

3. ವನ್ಯಪ್ರಾಣಿಯಿಂದ ಉಂಟಾದ ಪ್ರಾಣಹಾನಿ ಪ್ರಕರಣಗಳಿಗೆ ಅನುದಾನ ಲಭ್ಯತೆಯನ್ನಾಧರಿಸಿ ಪರಿಹಾರಧನವನ್ನು ವಿತರಿಸಲಾಗುವುದು.
4. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು (ವನ್ಯಜೀವಿ) ಇವರು ಎಲ್ಲಾ ಪ್ರಕರಣಗಳಲ್ಲಿ ಪರಿಹಾರ ಧನದ ವಿತರಣೆಯ ಆಡಳಿತವನ್ನು ನಿಭಾಯಿಸುವುದು.
5. ವನ್ಯಜೀವಿಗಳಿಂದ ಶಾಶ್ವತ ಅಂಗವಿಕಲತೆಗೊಳಗಾಗುವ ವ್ಯಕ್ತಿಗೆ ವೈದ್ಯಕೀಯ ಖರ್ಚುಗಳ ಜೊತೆಗೆ ಪರಿಹಾರ ಧನವನ್ನು ನೀಡುವ ಅವಕಾಶವಿರುತ್ತದೆ.
6. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು, ಅರಣ್ಯ ಸಂರಕ್ಷಣಾಧಿಕಾರಿಗಳು ಪರಿಹಾರ ಮೊತ್ತವು ಹೆಚ್ಚಿರುವ ಪ್ರಕರಣಗಳಲ್ಲಿ ಪರಿಹಾರ ಧನ ವಿತರಿಸುವ ಸಂದರ್ಭದಲ್ಲಿ ಸಂಬಂಧಿಸಿದ ಕ್ಷೇತ್ರ ವ್ಯಾಪ್ತಿಯ ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಂದ/ಅರಣ್ಯ ಸಂರಕ್ಷಣಾಧಿಕಾರಿಗಳಿಂದ ಸ್ಥಳ ತಪಾಸಣೆ ಮಾಡಿಸುವುದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ 143/ವೆಚ್ಚ-5/2010 ದಿನಾಂಕ: 11-04-2011ರಲ್ಲಿ ನೀಡಿರುವ ಸಹಮತಿಯನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಬಿ.ಪಿ.ರಾಮಕೃಷ್ಣ)
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಗೆ,
ಸಂಕಲನಕಾರರು, ಕರ್ನಾಟಕ ರಾಜ್ಯಪತ್ರ, ಬೆಂಗಳೂರು ಇವರಿಗೆ ಮುಂದಿನ ರಾಜ್ಯ ಪತ್ರದಲ್ಲಿ ಪ್ರಕಟಿಸಲು ಹಾಗೂ ಈ ಆದೇಶದ 500 ಪ್ರತಿಗಳನ್ನು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು – 560 003 ಇವರಿಗೆ ಒದಗಿಸಲು ಹಾಗೂ 250 ಪ್ರತಿಗಳನ್ನು ಮೇಲೆ ಸಹಿ ಮಾಡಿದವರಿಗೆ ಒದಗಿಸಲು ಕೋರಿದೆ.

**<u>ಪ್ರತಿಗಳು:</u>**

1. ಪ್ರಧಾನ ಮಹಾಲೇಖಪಾಲರು, (ಲೆಕ್ಕಪತ್ರ/ಲೆಕ್ಕಪರಿಶೋಧನೆ) ಕರ್ನಾಟಕ, ಬೆಂಗಳೂರು.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
4. ಎಲ್ಲಾ ಅಪರ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು/ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಗಳು/ ಅರಣ್ಯ ಸಂರಕ್ಷಣಾಧಿಕಾರಿಗಳು/ಉಪ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಾದೇಶಿಕ/ವನ್ಯಜೀವಿ)/ ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳು (ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ) ಬೆಂಗಳೂರು ಇವರ ಮುಖಾಂತರ).
5. ರಾಜ್ಯ ವನ್ಯಜೀವಿ ಮಂಡಳಿಯ ಉಪಾಧ್ಯಕ್ಷರ ಆಪ್ತ ಕಾರ್ಯದರ್ಶಿಗಳು, ವಿ.ವಿ.ಗೋಪುರ, ಡಾ:ಅಂಬೇಡ್ಕರ್ ರಸ್ತೆ, ಬೆಂಗಳೂರು-1.
6. ಮಾನ್ಯ ಅರಣ್ಯ ಮತ್ತು ಸಣ್ಣ ಕೈಗಾರಿಕಾ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
7. ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ-4), ವಿಧಾನಸೌಧ, ಬೆಂಗಳೂರು.
8. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

ಕರ್ನಾಟಕ ಸರ್ಕಾರ

ಸಂಖ್ಯೆ: ಅಪಜೀ 162 ಎಫ್‌ಡಬ್ಲ್ಯುಎಲ್ 2008

ಕರ್ನಾಟಕ ಸರ್ಕಾರದ ಸಚಿವಾಲಯ,
ಬಹುಮಹಡಿ ಕಟ್ಟಡ,
ಬೆಂಗಳೂರು, ದಿನಾಂಕ: 05-06-2009.

## ತಿದ್ದುಪಡಿ

ಸರ್ಕಾರದ ಆದೇಶ ಸಂಖ್ಯೆ: ಅಪಜೀ 259 ಎಫ್‌ಡಬ್ಲ್ಯುಎಲ್ 2006, ದಿನಾಂಕ: 17-01-2007ರ ಕ್ರಮ ಸಂಖ್ಯೆ: 1ರಲ್ಲಿ ಕಾಡು ಪ್ರಾಣಿಗಳಿಂದ ಬೆಳೆ ಹಾನಿಯಾದ ಪ್ರಕರಣಗಳಿಗೆ ಮಂಜೂರು ಮಾಡಬಹುದಾದ ಪರಿಹಾರ ಧನವನ್ನು ಈ ಕೆಳಗಿನಂತೆ ಪರಿಷ್ಕರಿಸಿ ತಿದ್ದುಪಡಿ ಮಾಡಲಾಗಿದೆ.

| ಕ್ರ. ಸಂ. | ವಿವರಗಳು | ವಿತರಿಸಲಾಗುವ ಕನಿಷ್ಠ ಎಕ್ಸ್‌ಗ್ರೇಶಿಯಾ | ವಿತರಿಸಲಾಗುವ ಗರಿಷ್ಠ ಎಕ್ಸ್‌ಗ್ರೇಶಿಯಾ |
|---|---|---|---|
| 1. | ರೂ. 5,800/- ವರೆಗಿನ ಮೊತ್ತದ ಬೆಳೆನಾಶಕ್ಕೆ ಭೂ ಮಾಲೀಕರಿಗೆ ಮಂಜೂರು ಮಾಡುವ ದಯಾತ್ಮಕಧನ (ಎಕ್ಸ್‌ಗ್ರೇಶಿಯಾ) | ಬೆಳೆ ನಾಶದ ಪೂರ್ಣ ಮೊತ್ತ | ಬೆಳೆ ನಾಶದ ಪೂರ್ಣ ಮೊತ್ತ |
| 2. | ರೂ.5,801/- ರಿಂದ ರೂ.29,000/- ವರೆಗಿನ ಮೊತ್ತದ ಬೆಳೆ ನಾಶಕ್ಕೆ ಭೂ ಮಾಲೀಕರಿಗೆ ಮಂಜೂರು ಮಾಡುವ ದಯಾತ್ಮಕಧನ (ಎಕ್ಸ್‌ಗ್ರೇಶಿಯಾ) | ರೂ.5,820/- (ರೂ. ಐದು ಸಾವಿರದ ಎಂಟುನೂರ ಇಪ್ಪತ್ತು ಮಾತ್ರ) ರೂ.5.820/-ಕ್ಕೂ ಮೀರಿದ ಬೆಳೆನಷ್ಟದ ಮೊತ್ತದ ಶೇ. 50 ರಷ್ಟು. | ಪ್ರತಿ ಪ್ರಕರಣಕ್ಕೆ ಗರಿಷ್ಠ ಮೊತ್ತ ರೂ.17,500/- (ರೂ. ಹದಿನೇಳು ಸಾವಿರದ ಐದುನೂರು ಮಾತ್ರ) |
| 3. | ರೂ.29.000/-ಮತ್ತು ಅದಕ್ಕೂ ಮೇಲ್ಪಟ್ಟ ಮೊತ್ತದ ಬೆಳೆ ನಾಶಕ್ಕೆ ಭೂ ಮಾಲೀಕರಿಗೆ ಮಂಜೂರು ಮಾಡುವ ದಯಾತ್ಮಕಧನ (ಎಕ್ಸ್‌ಗ್ರೇಶಿಯಾ) | ರೂ.17.500/- (ರೂ. ಹದಿನೇಳು ಸಾವಿರದ ಐದುನೂರು ಮಾತ್ರ) ರೂ.29,000/-ಕ್ಕೂ ಮೀರಿದ ಬೆಳೆನಷ್ಟದ ಮೊತ್ತದ ಶೇ. 30 ರಷ್ಟು. | ಪ್ರತಿ ಪ್ರಕರಣಕ್ಕೆ ಗರಿಷ್ಠ ಮೊತ್ತ ರೂ.45,000/- (ರೂ. ನಲ್ವತ್ತೈದು ಸಾವಿರದ ಐದುನೂರು ಮಾತ್ರ) |

ಮುಂದುವರೆದು ಆದೇಶ ಸಂಖ್ಯೆ: ಅಪಜೀ 52 ಎಫ್‌ಡಬ್ಲ್ಯುಎಲ್ 96, ದಿನಾಂಕ: 12-02-2002ರಲ್ಲಿ ಬೆಳೆ ನಾಶ ಪ್ರಕರಣಗಳಿಗೆ ಸಂಬಂಧಿಸಿದಂತೆ ಎಕ್ಸ್‌ಗ್ರೇಶಿಯಾ ಮೊತ್ತಗಳನ್ನು ನಿಗದಿಪಡಿಸಿ ವಿತರಿಸಲು ಅರಣ್ಯ ಇಲಾಖೆಯ ಕ್ಷೇತ್ರಾಧಿಕಾರಿಗಳಿಗೆ ಪ್ರತ್ಯಾಯೋಜಿಸಿದ— ಅಧಿಕಾರವನ್ನು ಈ ತಿದ್ದುಪಡಿಯ ಮೂಲಕ ಪರಿಷ್ಕರಿಸಿದ್ದು, ರೂ.25,000/-ಕ್ಕಿಂತ ಮೇಲ್ಪಟ್ಟು ರೂ.1,00,000/-ಗಳ ವರೆಗೆ ಪರಿಹಾರ ಧನವನ್ನು

ನಿಗದಿಪಡಿಸಿ, ಮಂಜೂರು ಮಾಡುವ ಅಧಿಕಾರವನ್ನು ಸಹಾಯಕ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಹಾಗೂ ರೂ.1,00,000/-ಗಳಿಗಿಂತ ಹೆಚ್ಚು ನಾಶವಾದ ಬೆಳೆಗಳ ಮೌಲ್ಯಮಾಪನ ಮಾಡಿ ಪರಿಹಾರಧನ ನಿಗದಿಪಡಿಸಲು ಉಪ ಅರಣ್ಯ ಸಂರಕ್ಷಣಾಧಿಕಾರಿಗಳಿಗೆ ಅಧಿಕಾರ ಪ್ರತ್ಯಾಯೋಜಿಸಲಾಗಿದೆ. ಸದರಿ ಅಧಿಕಾರಿಗಳು ಘಟನೆ ನಡೆದ ಸ್ಥಳಗಳಿಗೆ ಖುದ್ದಾಗಿ ಭೇಟಿ ನೀಡಿ ಮಹಜರ್ ನಡೆಸಿ ಪರಿಹಾರ ಧನವನ್ನು ನಿಗದಿಪಡಿಸಿ ಪಾವತಿ ಮಾಡತಕ್ಕದ್ದು.

ಸದರಿ ಪ್ರಸ್ತಾವನೆಗೆ ಅನಧಿಕೃತ ಟಿಪ್ಪಣಿ ಸಂಖ್ಯೆ: ಆಇ/153/ವೆಚ್ಚ-5/2009, ದಿನಾಂಕ: 23-03-2009ರ ಪ್ರಕಾರ ಆರ್ಥಿಕ ಇಲಾಖೆಯ ಸಹಮತಿ ಪಡೆದು ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

(ಪಿ.ಆರ್. ಕಲಾವತಿ) 5/6/09
ಸರ್ಕಾರದ ಅಧೀನ ಕಾರ್ಯದರ್ಶಿ,
ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ.

ಗೆ,

ಸಂಕಲನಕಾರರು, ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು - ಈ ಆದೇಶವನ್ನು ಮುಂದಿನ ಪ್ರಕಟಣೆಯಲ್ಲಿ ಮುದ್ರಿಸಿ ಪ್ರಕಟಿಸಲು ಮತ್ತು ಮುದ್ರಿತ 100 ಪ್ರತಿಗಳನ್ನು ಅರಣ್ಯ ಇಲಾಖೆಗೆ ಒದಗಿಸುವಂತೆ ಕೋರಿದೆ.

<u>ಪ್ರತಿಗಳು:</u>

1. ಪ್ರಧಾನ ಮಹಾಲೇಖಪಾಲರು (ಲೆಕ್ಕಪತ್ರ / ಪರಿಶೋಧನೆ), ಕರ್ನಾಟಕ, ಬೆಂಗಳೂರು.
2. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
3. ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವನ್ಯಜೀವಿ), ಅರಣ್ಯ ಭವನ, ಮಲ್ಲೇಶ್ವರಂ, ಬೆಂಗಳೂರು.
4. ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನ ಸೌಧ, ಬೆಂಗಳೂರು.
5. ಆರ್ಥಿಕ ಇಲಾಖೆ (ವೆಚ್ಚ-2), ವಿಧಾನ ಸೌಧ, ಬೆಂಗಳೂರು.
6. ಸರ್ಕಾರದ ಪ್ರಧಾನ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
7. ಸರ್ಕಾರದ ಕಾರ್ಯದರ್ಶಿ (ಅರಣ್ಯ), ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ರವರ ಆಪ್ತ ಕಾರ್ಯದರ್ಶಿ, ಬಹುಮಹಡಿ ಕಟ್ಟಡ, ಬೆಂಗಳೂರು.
8. ಸರ್ಕಾರದ ಉಪ ಕಾರ್ಯದರ್ಶಿ, ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ರವರ ಆಪ್ತ ಸಹಾಯಕರು, ಬಹುಮಹಡಿ ಕಟ್ಟಡ, ಬೆಂಗಳೂರು.
9. ಹೆಚ್ಚುವರಿ ಪ್ರತಿ / ಶಾಖಾ ರಕ್ಷಾ ಕಡತ.